VIJAYAKUMAR KANNUR
Digitally signed by VIJAYAKUMAR KANNUR
Date: 2025.12.20 17:08:30 +0530



**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ</u>**

**<u>ಸಾಕ್ಷಿಗೆ ಇಂದು ದಿನಾಂಕ 20.12.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ದೂರುದಾರ ಪರ ಶ್ರೀ LSA ವಕೀಲರಿಂದ :</u>**

ನಾನು SSLC ಯವರೆಗೆ ವಿದ್ಯಾಭ್ಯಾಸ ಮಾಡಿರುವೆನು. ನಾನು ಖಾಯಂ ಆಗಿ ಮುಧೋಳ ಪಟ್ಟಣದಲ್ಲಿ ವಾಸವಾಗಿರುವೆನು ಎಂದರೆ ಸರಿ. ನನ್ನ ಪತ್ರ ವ್ಯವಹಾರಗಳು ಶಾನೋಜಿ ಪಿ. ಭಾಗೋಜಿ ಡಿಲೆಕ್ಸ ಟೈಯರ್, ರಿಮೋಡ, ಶಾಂತನಗರ, ಮುಧೋಳ ಈ ವಿಳಾಸದಲ್ಲೇ ಆಗುತ್ತವೆ ಎಂದರೆ ಸರಿಯಲ್ಲ. ಈ ದೂರು ದಾಖಲು ಮಾಡುವ ಪೂರ್ವದಲ್ಲಿ ನನಗೆ ಕಾನೂನು ಬದ್ದವಾದ ತಿಳುವಳಿಕೆಯ ನೋಟಿಸು ಜಾರಿಯಾಗಿರುವುದು. ನಿಪಿ 3 ರ ನೋಟಿಸಿನಲ್ಲಿ ಕಾಣಿಸಿರುವ ವಿಳಾಸದ ನೋಟಿಸನ್ನು ನಾನು ಅಂಚೆ ಕಚೇರಿಗೆ ಹೋಗಿ ತೆಗೆದುಕೊಂಡು ಬಂದಿರುವೆನು, ಆದರೆ ಈ ವಿಳಾಸಕ್ಕೆ ಅವರು ನೋಟಿಸು ನೀಡಿರುವುದಿಲ್ಲ. ಈ ದೂರಿನ ಶಿರೋನಾವೆಯಲ್ಲಿ ಕಾಣಿಸಿರುವ ವಿಳಾಸದಲ್ಲಿ ನಾನು ಕೆಲಸ ಮಾಡುತ್ತಿರುವೆನು. ನಾನು ಈ ವಿಳಾಸದಲ್ಲಿ ಕೆಲಸ ಮಾಡುತ್ತಿರುವುದರಿಂದ ನನ್ನ ಹೆಸರಿನಲ್ಲಿ ಯಾವುದೇ ಪತ್ರಗಳು ಬಂದರೆ ನನಗೆ ಮುಟ್ಟತ್ತವೆ ಎಂದರೆ ಮುಟ್ಟುವುದಿಲ್ಲ.

2. ದೂರುದಾರನ ಪರಿಚಯ ನನಗೆ ಇರುವುದಿಲ್ಲ. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ದೂರುದಾರನ ಪರಿಚಯ ಇರುವುದರಿಂದ ನನಗೆ ಹಣಕಾನ ತೊಂದರೆ ಇರುವುದರಿಂದ ಆ ಕಾರಣಕ್ಕಾಗಿ ನಾನು 2024 ರ ಆಗಸ್ಟ ತಿಂಗಳಲ್ಲಿ ದೂರುದಾರನ ಕಡೆಯಿಂದ ರೂ. 7 ಲಕ್ಷ 60 ಸಾವಿರ ಹಣ ನೀಡುವಂತೆ ಕೇಳಿದ್ದೇನು ಎಂದರೆ ಸರಿಯಲ್ಲ. ನನ್ನ ವಿನಂತಿಯ ಮೇರೆಗೆ ದೂರುದಾರ ಆಗಸ್ಟ ತಿಂಗಳ 2 ನೇ ವಾರದಲ್ಲಿ ನನಗೆ ರೂ. 7 ಲಕ್ಷ 60 ಸಾವಿರ ಹಣವನ್ನು ಕೈಗಡ ರೂಪದಲ್ಲಿ ನೀಡಿರುವನು ಎಂದರೆ ಸರಿಯಲ್ಲ. ಸದರಿ ಹಣವನ್ನು ನಾನು 3-4 ತಿಂಗಳ ಅವಧಿಯೊಳಗಾಗಿ ಮರಳಿ ನೀಡುವುದಾಗಿ ಎಂದು ಹೇಳಿದ್ದು ಆಗ ನೀಡದೆ

ಇದ್ದಾಗ ದೂರುದಾರ ಸಾಕಷ್ಟ ಬಾರಿ ನನ್ನ ಹತ್ತಿರ ಬಂದು ಈ ಕೈಗಡ ಸಾಲದ ಹಣ ಮರಳಿ ನೀಡುವಂತೆ ಕೇಳಿಕೊಂಡಿರುವನು ಎಂದರೆ ಸರಿಯಲ್ಲ. ಕೊನೆಯದಾಗಿ ನಾನು ದಿಃ 02.12.2024 ರಂದು ನಿಪಿ 1 ರ ಚೆಕ್ ನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಚೆಕು ನಗಧೀಕರಣಕ್ಕಾಗಿ ಬ್ಯಾಂಕಿಗೆ ಸಲ್ಲಿಸಿದಾಗ ಆ ಚೆಕ್ ಅಮಾನ್ಯಗೊಂಡು ಮರಳಿ ಬಂದಿರುವುದು ಎಂದರೆ ಸರಿಯಲ್ಲ. ನಂತರ ಚೆಕ್ ನ ಹಣ ನೀಡುವಂತೆ ಹೇಳಿ ದೂರುದಾರ ದಿಃ 13.12.2024 ರಂದು ನೊಂದಾಯಿತ ಅಂಚೆಯ ಮೂಲಕ ನಿಪಿ 3 ರಂತೆ ನೋಟಿಸು ನೀಡಿರುವನು ಎಂದರೆ ಸರಿ. ಸದರಿ ನೋಟಿಸಿಗೆ ನಾನು ಉತ್ತರವನ್ನು ನೀಡಿರುವುದಿಲ್ಲ, ಏಕೆಂದರೆ ಆರೋಪಿ ನನಗೆ ಪರಿಚಯ ಇರದೇ ಇರುವುದರಿಂದ ಹಾಗೂ ನಾನು ಡಿಲೆಕ್ಸ ಟೈಯರ್ ರಿಮೋಡ ಶಾಂತನಗರದ ಮಾಲೀಕರಾದ ವಿಜಯಕುಮಾರು ಮೋಹನಲಾಲ ಪಲ್ತು ಇವರ ಹತ್ತಿರ ಕೆಲಸ ಮಾಡುತ್ತಿದ್ದು ಆ ಸಮಯದಲ್ಲಿ ವಿಜಯಕುಮಾರ ಮುಧೋಳ ಪಟ್ಟಣದ ರನ್ನ ಸೌಹಾರ್ದ ಸಹಕಾರಿ ಬ್ಯಾಂಕಿನಲ್ಲಿ ಸಾಲ ಪಡೆದುಕೊಂಡಿದ್ದು ಆ ಸಾಲದ ಹಣಕ್ಕೆ ನಾನು ಜಾಮೀನುದಾರನಾಗಿದ್ದು, ಆ ಸಮಯದಲ್ಲಿ ಬ್ಯಾಂಕಿನವರು ನನ್ನ ಖಾಲಿ ಸಹಿ ಮಾಡಿದ ನನ್ನ 2 ಚೆಕ್ ಗಳನ್ನು ಭದ್ರತೆಗಾಗಿ ಪಡೆದುಕೊಂಡಿದ್ದರು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರನ್ನ ಸೌಹಾರ್ದ ಬ್ಯಾಂಕಿನವರು ನಾನು ನೀಡಿರುವ ಭದ್ರತೆಗಾಗಿ ನೀಡಿರುವ ಚೆಕ್ ನ್ನು ಈ ದೂರುದಾರನ ಮೂಲಕ ದುರುಪಯೋಪಡಿಸಿಕೊಂಡ ಬಗ್ಗೆ ಅವರ ವಿರುದ್ದ ಯಾವುದೇ ಕಾನೂನಿನ ಕ್ರಮ ತೆಗೆದುಕೊಂಡಿರುವುದಿಲ್ಲ. ಈಗಲೂ ಸಹ ಆ ಬ್ಯಾಂಕಿನ ವಿರುದ್ದ ಕ್ರಮ ಕೈಗೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ.

3. ನನಗೆ ದೂರುದಾರನ ಸಾಕಷ್ಟು ಪರಿಚಯ ಇರುವುದು. ಆತನ ಕಡೆಯಿಂದ ಪಡೆದುಕೊಂಡಿರುವ ಹಣವನ್ನು ಮರಳಿ ನೀಡಬೇಕಾಗುತ್ತದೆ ಎಂಬ ಕಾರಣಕ್ಕೆ ಆ ಹಣ ಮುಳುಗಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರ ಆ ಬ್ಯಾಂಕಿನ ನೀರ್ದೇಶಕನಾಗಿರುವುದರಿಂದ ಆ ಹುದ್ದೇಯ ದುರುಪಯೋಪಡಿಸಿಕೊಂಡು ಈ ಸುಳ್ಳು ದೂರು ದಾಖಲು ಮಾಡಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತ್ತು ನಾನು

ಜಾಮೀನಾಗಿರುವ ಸಾಲದ ಹಣಕ್ಕೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ದೂರುದಾರ ತನ್ನ ವೈಯಕ್ತಿಕ ನಾತೆಯಿಂದ ಕೈಗಡ ಸಾಲವನ್ನು ನನಗೆ ನೀಡಿದ್ದು, ಆದರೂ ಸಹ ನಾನು ಆ ಕೈಗಡ ಹಣ ಪಡೆದುಕೊಂಡಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR

Digitally signed by VIJAYAKUMAR KANNUR
Date: 2025.12.20 17:08:37 +0530